**ಪ್ರತಿವಾದಿ ನಂ.22 ಇವರ ಅರ್ಜಿಯ ಮೇರೆಗೆ ಸಾಕ್ಷಿಯನ್ನು ದಿಃ *15/12/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

***ಮುಂದುವರೆದ ಪಾಟೀ ಸವಾಲು : ಶ್ರೀ ಎಂಬಿಜಿ ವಕೀಲರಿಂದ ಪ್ರತಿವಾದಿ ನಂ.22 ಪರವಾಗಿ.***

ವಾದಿಯರು ಕೂಲಿ ಕೆಲಸ ಮಾಡುತ್ತಾರೆ. ಸದರಿಯವರು ಬೇರೆ ಬೇರೆ ಊರುಗಳಲ್ಲಿ ವಾಸ ಮಾಡುತ್ತಾರೆ. ರಾಯಪ್ಪನ ನಾಲ್ಕು ಜನ ಗಂಡು ಮಕ್ಕಳ ಪೈಕಿ ಎಲ್ಲರೂ ತೀರಿಹೋಗಿದ್ದಾರೆ. ರಾಯಪ್ಪನ ಮಕ್ಕಳು ತೀರಿಹೋದ ನಂತರ ಅವರವರ ಮಕ್ಕಳು ಅವರವರ ಪಾಲಿನ ಉಳುಮೆ ಮಾಡುತ್ತಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಮ್ಮ ಪಾಲಿನ ಜಮೀನು ನಾವು ಉಳುಮೆ ಮಾಡುತ್ತಿದ್ದೇವೆ ಎಂದು ಉತ್ತರಿಸುತ್ತಾರೆ. ನನ್ನ ತಾಯಿ ಸಾವಕ್ಕ ರಾಯಪ್ಪನ ಮಗಳು ಎನ್ನುವುದಕ್ಕೆ ಪುರಾವೆ ಹಾಜರುಪಡಿಸಿರುತ್ತೇನೆ.

ದಾವಾದಾಸ್ತಿಗಳನ್ನು ನಾವು ಸಹ ಉಳುಮೆ ಮಾಡುತ್ತಾ ಬಂದಿದ್ದೇವೆ ಎಂದರೆ ನಿಜ. ದಾವಾದಾಸ್ತಿಯನ್ನು ಮಾರಾಟ ಮಾಡುವವರೆಗೆ ರಾಯಪ್ಪನ ಗಂಡು ಮಕ್ಕಳು ಉಳುಮೆ ಮಾಡುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾವು ಸಹ ಉಳುಮೆ ಮಾಡುತ್ತಿದ್ದೇವು ಎಂದು ಉತ್ತರಿಸುತ್ತಾರೆ. ನಾನು ಸಾವಕ್ಕನ ಮಗ ಎಂದು ತೋರಿಸಲು ಪುರಾವೆ ಹಾಜರುಪಡಿಸಿದ್ದೇನೆ. ನಮ್ಮ ಮತ್ತು ಪ್ರತಿವಾದಿಯರ ಮಧ್ಯ ಮಾತುಕತೆ ಇದ್ದು, ಆದರೆ ಅವರ ಮನೆ ನಮ್ಮ ಮನೆ ಬೇರೆ ಬೇರೆ ಇರುತ್ತವೆ.

ದಾವಾದಾಸ್ತಿಯನ್ನು ಯಾರಿಗೆ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತು. ಮಾರಾಟ ಮಾಡಿದಾಗಿನಿಂದ ಗುರುದತ್ತ ರಾಯ್ಕರ ಇವರ ಕಬ್ಜೆ ವಹಿವಾಟಿನಲ್ಲಿ ದಾವಾ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಜಮೀನು ಭೂ ಸ್ವಾಧೀನ ಮಾಡಿಕೊಂಡ ನಂತರ ನಮ್ಮನ್ನು ಹೊರಗೆ ಹಾಕಿರುತ್ತಾರೆ, ಆವಾಗಿನಿಂದ ಜಮೀನು ಖಾಲಿ ಬಿದ್ದಿರುತ್ತದೆ. ರಾಯಪ್ಪನ ಮಕ್ಕಳ ನಡುವೆ ಈಗಾಗಲೇ ವಾಟ್ನಿಯಾಗಿದ್ದು, ವಾಟ್ನಿಯಾಗಿದ್ದು ಭೂ ಸ್ವಾಧೀನ ಮಾಡಿಕೊಂಡಿದ್ದು, ಪರಿಹಾರ ಹಣ ಸಿಗಬೇಕಾದರೆ ಅವರಿಗೆ ಸಿಗಬೇಕು, ಅದರಲ್ಲಿ ನಮಗೆ ಯಾವುದೇ ರೀತಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.